## ನಿವೇದನೆ

# ಮಂಡಳಿಯ ಮಾಲಿನ್ಯಕ್ಕೆ ಸೋಪು

'ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯ?' ಎನ್ನುವ ಅಕ್ಕಮಹಾದೇವಿ ವಚನದ ಸಾಲಿನ ವಾಚ್ಯಾರ್ಥಕ್ಕೆ 'ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ಮಂಡಳಿ' ಅಂಟಿಕೊಂಡಂತಿದೆ. ಮಂಡಳಿಯ ಪಾಲಿಗೆ ಬೆಂಗಳೂರು ಮಹಾನಗರದಲ್ಲಿ ಮಾಲಿನ್ಯದ ಪ್ರಮಾಣ ನಿಯಂತ್ರಣದಲ್ಲೇ ಇದೆ; ಒಂದು ವೇಳೆ ಪರಿಸ್ಥಿತಿ ಹದಗೆಟ್ಟಿದ್ದಲ್ಲಿ, ಅದಕ್ಕೆ ನಗರ ಸಾರಿಗೆ (ಬಿಎಂಟಿಸಿ) ಮತ್ತು ಟ್ರಾಫಿಕ್ ಪೊಲೀಸ್ ವ್ಯವಸ್ಥೆಯ ವೈಫಲ್ಯ ಕಾರಣವಾಗಿದೆ. ಹೀಗೆ ನೆಪ ಹೇಳುವ ಮೂಲಕ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತ ಬಂದಿರುವ ಮಂಡಳಿಗೆ ಹೈಕೋರ್ಟ್ ಸರಿಯಾದ ತಪರಾಕಿಯನ್ನೇ ನೀಡಿದೆ. ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಯಾಕೆ ರದ್ದು (ಸೂಪರ್ ಸೀಡ್) ಮಾಡಬಾರದು ಎಂದು ಪ್ರಶ್ನಿಸಿದೆ.

ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿರುವ ಹೈಕೋರ್ಟ್ ವಿಭಾಗೀಯ ಪೀಠದ ಮಾತುಗಳು, ಪರಿಸರ ಮಂಡಳಿಯ ಕಾರ್ಯವೈಖರಿಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿರುವುದರ ಜೊತೆಗೆ, ಬೆಂಗಳೂರಿನ ನಾಗರಿಕರು ತಮ್ಮ ಮೂಲಭೂತ ಹಕ್ಕುಗಳಿಂದ ವಂಚಿತರಾಗುತ್ತಿರುವುದನ್ನೂ ಸೂಚಿಸಿದೆ. ಕೈಗಾರಿಕಾ ಪ್ರದೇಶಗಳಿಗಿಂತಲೂ ಹೆಚ್ಚಿನ ಮಾಲಿನ್ಯ ವಸತಿ ಪ್ರದೇಶಗಳಲ್ಲಿ ಇರುವುದನ್ನು ಅಲ್ಲಿ ವಾಸಿಸುವ ನಾಗರಿಕರಷ್ಟೇ ಬಲ್ಲರು. ಈ ನಾಗರಿಕರ ಸಂಕಟದ ಮೂರ್ತರೂಪವಾಗಿ ಮಾತನಾಡಿರುವ ಹೈಕೋರ್ಟ್ ಪೀಠ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಪರಿಸರ ಮಂಡಳಿಗೆ ನೋಟಿಸ್ ಜಾರಿ ಮಾಡಲು ಆದೇಶಿಸಿದೆ. ಈ ಮೊದಲು ಕೂಡ, ಸರಿಯಾಗಿ ಕೆಲಸ ಮಾಡದ ಮಂಡಳಿಯ ಅಧಿಕಾರಿಗಳಿಗೆ ಸಂಬಳ ನೀಡಿ ಹಣ ಅಪವ್ಯಯ ಮಾಡುವ ಬದಲು, ಮಂಡಳಿಯನ್ನು ಮುಚ್ಚುವುದೇ ಉತ್ತಮ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು.

ಹಾಗೆ ನೋಡಿದರೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ನಿಷ್ಕ್ರಿಯವಾಗಿಯೇನೂ ಇಲ್ಲ. ಪರಿಸರ ಜಾಗೃತಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಶಾಲಾ ಕಾಲೇಜುಗಳಲ್ಲಿ ನಿರಂತರವಾಗಿ ನಡೆಸುತ್ತಿದೆ. ನಗರದಲ್ಲಿ ಮಾಲಿನ್ಯಕ್ಕೆ ಕಾರಣ ಆಗುತ್ತಿರುವವರ ಮತ್ತು ನಿಯಮಗಳನ್ನು ಉಲ್ಲಂಘಿಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಹೋಮ್‌ಗಾರ್ಡ್‌ಗಳನ್ನು ನೇಮಿಸಿಕೊಂಡಿದೆ. ಆದರೆ, ಇದೆಲ್ಲದರ ಫಲಿತಾಂಶ ಏನು ಎಂದರೆ ಉತ್ತರಿಸಲು ಮಂಡಳಿ ತಡಬಡಾಯಿಸುತ್ತದೆ. ಇದರರ್ಥ ಇಷ್ಟೇ, ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಮಂಡಳಿಯ ಚಟುವಟಿಕೆಗಳು ಮೂರು ದಶಕಗಳಷ್ಟು ಪುರಾತನವಾದವು ಹಾಗೂ ಈ ಕಾರ್ಯಕ್ರಮಗಳು ಬಹುತೇಕ ಸರ್ಕಾರಿ ಆಚರಣೆಗಳಂತೆ ಸಾಂಪ್ರದಾಯಿಕವಾದವು. ಇಚ್ಛಾಶಕ್ತಿ ಮತ್ತು ಬದ್ಧತೆಯಿಲ್ಲದ ಇಂಥ ಕಾಟಾಚಾರದ ಕಾರ್ಯಕ್ರಮಗಳಿಂದ ಸರ್ಕಾರಿ ಬೊಕ್ಕಸಕ್ಕೆ ಹೊರೆಯೇ ಹೊರತು, ಜನಸಾಮಾನ್ಯರಿಗೆ ಉಪಯೋಗವೇನೂ ಇಲ್ಲ.

ಪ್ರಸ್ತುತ ಬೆಂಗಳೂರು ಮಹಾನಗರವನ್ನು ಕಾಡುತ್ತಿರುವ ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯ ಸಮಸ್ಯೆಗಳು ಜನಸಾಮಾನ್ಯರ ಮಾನಸಿಕ – ದೈಹಿಕ ಆರೋಗ್ಯಕ್ಕೆ ಮಾರಕವಾಗಿವೆ. ವಿಶೇಷವಾಗಿ ಶಾಲಾ ಮಕ್ಕಳು ಹಾಗೂ ಹಿರಿಯ ನಾಯಕರು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ. ನಗರದಲ್ಲಿ ಗುರ್ತಿಸಲಾಗಿರುವ ನಿಶ್ಶಬ್ದ ವಲಯಗಳು ಹೆಸರಿಗಷ್ಟೇ ಇವೆ. ಈ ಹಿನ್ನೆಲೆಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ ಎಂದು ಹೈಕೋರ್ಟ್ ಪೀಠ ಅಭಿಪ್ರಾಯಪಟ್ಟಿದೆ. ಪ್ರಸ್ತುತ ಬೆಂಗಳೂರಿನಲ್ಲಿ ಎಂಟು–ಹತ್ತು ಕಿ.ಮೀ. ಅಂತರವನ್ನು ಕ್ರಮಿಸಲು ಒಂದು ತಾಸಿಗೂ ಹೆಚ್ಚು ಸಮಯ ತಗುಲುತ್ತಿದೆ. ಇದನ್ನು ಸಮಯದ ಅಪವ್ಯಯ ಎಂದು ವ್ಯಾಖ್ಯಾನಿಸಿರುವ ಹೈಕೋರ್ಟ್, ಸಾರಿಗೆ ವ್ಯವಸ್ಥೆಯನ್ನು ಸುಲಲಿತಗೊಳಿಸುವಂತೆ ಸೂಚಿಸಿದೆ. ಈ ನಿಟ್ಟಿನಲ್ಲಿ ಟ್ರಾಫಿಕ್ ಪೊಲೀಸರು ಹೆಚ್ಚು ಪರಿಣಾಮಕಾರಿಯಾಗಬೇಕಿದೆ. ಅಂತೆಯೇ, ನಿಗದಿತ ನಿಲ್ದಾಣದಲ್ಲಿ ನಿಲ್ಲುವ ಬದಲು ಎಲ್ಲೆಂದರಲ್ಲಿ ನಿಲ್ಲುವ ಬಿಎಂಟಿಸಿ ಬಸ್‌ಗಳು ಸಂಚಾರಿ ದಟ್ಟಣೆಗೆ ಕಾರಣ ಆಗುತ್ತಿರುವುದು ಕೂಡ ತಪ್ಪಬೇಕಿದೆ.

ನಗರದಲ್ಲಿ ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯ ಹೆಚ್ಚುತ್ತಿರುವುದಕ್ಕೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯನ್ನಷ್ಟೇ ದೂಷಿಸಿ ಫಲವಿಲ್ಲ. ಈ ವೈಫಲ್ಯದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ್ದೂ ಪಾತ್ರವಿದೆ. ಪರಿಣಾಮಕಾರಿಯಾಗಿ ಕೆಲಸ ಮಾಡದ ಮಂಡಳಿಯ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ಕೂಡ ಅಸಹಾಯಕವಾಗಿರುವುದನ್ನು ಹೈಕೋರ್ಟ್ ಗಮನಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಿಗಳು ಮತ್ತು ಸರ್ಕಾರ ದಡ್ಡುಬಿದ್ದಾಗ ಗದರುವ ಕೆಲಸವನ್ನು ನ್ಯಾಯಾಂಗ ಮಾಡಬೇಕಿದೆ. ಈ ಗದರಿಕೆಯಿಂದಲಾದರೂ ಮಂಡಳಿ ಚುರುಕಾದರೆ, ಬೆಂಗಳೂರಿನ ಜನರ ಉಸಿರಾಟ ಕೊಂಚ ಸರಾಗವಾಗಬಹುದು.

■ **ರಘುನಾಥ ಚ.ಹ.**

ಪ್ರಸ್ತುತ ಬೆಂಗಳೂರು ಮಹಾನಗರವನ್ನು ಕಾಡುತ್ತಿರುವ ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯ ಸಮಸ್ಯೆಗಳು ಜನಸಾಮಾನ್ಯರ ಮಾನಸಿಕ – ದೈಹಿಕ ಆರೋಗ್ಯಕ್ಕೆ ಮಾರಕವಾಗಿವೆ. ವಿಶೇಷವಾಗಿ ಶಾಲಾ ಮಕ್ಕಳು ಹಾಗೂ ಹಿರಿಯ ನಾಯಕರು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ. ನಗರದಲ್ಲಿ ಗುರ್ತಿಸಲಾಗಿರುವ ನಿಶ್ಶಬ್ದ ವಲಯಗಳು ಹೆಸರಿಗಷ್ಟೇ ಇವೆ.



ವಿಜಯ